International Journal of Kannada Research
www.kannadajournal.com

ISSN: 2454–5813
IJKR 2023; 9(4): 103-105
© 2023 IJKR
www.kannadajournal.com
Received: 08-10-2023
Accepted: 13-11-2023

**ಡಾ. ಕೆ.ಎಸ್. ಪಾಟೀಲ**
ಇತಿಹಾಸ ಸಹಾಯಕ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಧಾರವಾಡ, ಕರ್ನಾಟಕ, ಭಾರತ

**Corresponding Author:**
**ಡಾ. ಕೆ.ಎಸ್. ಪಾಟೀಲ**
ಇತಿಹಾಸ ಸಹಾಯಕ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಧಾರವಾಡ, ಕರ್ನಾಟಕ, ಭಾರತ

# ಹೂಲಿಯ ಶಾಸನಗಳ ಹಿನ್ನೆಲೆಯಲ್ಲಿ ಮಧ್ಯಯುಗೀನ ಕರ್ನಾಟಕದ ವಾಸ್ತುಶಿಲ್ಪ ಪರಿಭಾಷೆ

**ಡಾ. ಕೆ.ಎಸ್. ಪಾಟೀಲ**

## ಪೀಠಿಕೆ

ಮಧ್ಯಯುಗೀನ, ಅಂದರೆ ಕಲ್ಯಾಣದ ಚಾಳುಕ್ಯ, ದ್ವಾರಸಮುದ್ರದ ಹೊಯ್ಸಳ, ದೇವಗಿರಿಯ ಯಾದವರ ಕಾಲದ ಕರ್ನಾಟಕದ ವಾಸ್ತುಶಿಲ್ಪಗಳು ಮಯಮತ, ಮಾನಸಾರ ಮುಂತಾದ 'ದಾಕ್ಷಿಣಾತ್ಯ' ಶಿಲ್ಪಶಾಸ್ತ್ರಗಳಲ್ಲಿ ಕೊಡಮಾಡಿರುವ ವಿವರಗಳಿಗಿಂತ ಬಹಳಷ್ಟು ಹೊರತಾಗಿರುವ ಪರಂಪರೆಯನ್ನು ಅನುಸರಿಸಿರುವುದು ಈಗ ಹೆಚ್ಚು ಕಡಿಮೆ ಸ್ಥಿರಪಟ್ಟಿರುವ ವಿಚಾರ. ಅಂದಿನ ದೇವಾಲಯಗಳ ಅಧ್ಯಯನದಿಂದ ಆ ಕಾಲದ ವಾಸ್ತುಶಿಲ್ಪಿಗಳು (ಸೂತ್ರಧಾರರು) "ಔತ್ತರೇಯ" ನಾಗರಪ್ರಾಸಾದ ಮತ್ತು ಅದರ ಪ್ರಭೇದಗಳ ಸರಿಯಾದ ಜ್ಞಾನವನ್ನು ಹೊಂದಿದ್ದರೆಂಬುದು ಪ್ರಕಟವಾಗುತ್ತದೆ. ಲಕ್ಕುಂಡಿಯ ಕಾಶೀವಿಶ್ವೇಶ್ವರ, ಕುಬ್ಬಟೂರಿನ ಕೈಟಭೇಶ್ವರ, ಹಾನಗಲ್ಲಿನ ತಾರಕೇಶ್ವರ ಮುಂತಾದ ಪ್ರಸಿದ್ಧ ದೇವಾಲಯಗಳ ಜಂಘಾ (ಭಿತ್ತಿ) ಭಾಗದಲ್ಲಿ ನಾಗರ ಶಿಖರಗಳ ವೈವಿಧ್ಯಗಳು ವಿಫುಲವಾಗಿ ನಿದರ್ಶಿತವಾಗಿವೆ. ಇವಲ್ಲದೆ, ಉಮಾಪುರ (ಶಿವ ದೇವಾಲಯ, ಬೀದರ ಜಿಲ್ಲೆ), ಶಿರೂರು (ಸಿದ್ಧೇಶ್ವರ ದೇವಾಲಯ, ಬಾಗಲಕೋಟೆ ಜಿಲ್ಲೆ), ಹತ್ತರಗಿ (ಶಿಖರೇಶ್ವರ ದೇವಾಲಯ, ಬೆಳಗಾವಿ ಜಿಲ್ಲೆ), ಅಮರಗೋಳ (ಬನಶಂಕರಿ ದೇವಾಲಯದ ಉತ್ತರ ಪ್ರಾಸಾದ, ಧಾರವಾಡ ಜಿಲ್ಲೆ), ಹಾನಗಲ್ಲು (ಗಣೇಶ ದೇವಾಲಯ, ಹಾವೇರಿ ಜಿಲ್ಲೆ), ಬೇಲೂರು (ಚನ್ನಕೇಶವ ದೇವಾಲಯ, ಹಾಸನ ಜಿಲ್ಲೆ), ನುಗ್ಗೆಹಳ್ಳಿ (ಸದಾಶಿವ ದೇವಾಲಯ ಹಾಸನ ಜಿಲ್ಲೆ), ತುರುವೇಕೆರೆ (ಮೂಲೇಶಂಕರ ದೇವಾಲಯ, ತುಮಕೂರು ಜಿಲ್ಲೆ) ಮುಂತಾದವು ಲತಿನ, ಭೂಮಿಜ, ಶೇಖರೀ ಮುಂತಾದ ನಾಗರ ಪ್ರಾಸಾದ ಪ್ರಭೇದಗಳ ಉದಾಹರಣೆಗಳನ್ನೊದಗಿಸಿವೆ. ಕುಬಟೂರಿನ ಶಾಸನವಂತೂ ದ್ರಾವಿಡ, ಭೂಮಿಜ, ನಾಗರಜಾತಿಗಳನ್ನು ನೇರವಾಗಿ ಹೆಸರಿಸಿದೆ. ಈ ಹಿನ್ನಲೆಯಲ್ಲಿ ಮಧ್ಯಯುಗೀನ ಕರ್ನಾಟಕ ಸಾಮ್ರಾಜ್ಯದ ದೇಗುಲಗಳನ್ನು ಅಧ್ಯಯನಕ್ಕೊಳಪಡಿಸುವಾಗ, ಸಮಕಾಲೀನ "ಸಮರಾಂಗಣಸೂತ್ರಧಾರ", 'ಅಪರಾಜಿತಪೃಚ್ಛಾ' ಮುಂತಾದ ಔತ್ತರೇಯ ಶಿಲ್ಪಶಾಸ್ತ್ರ ಗ್ರಂಥಗಳು ಉಪಯುಕ್ತ ಕೈಪಡಿಗಳಾಗಬಲ್ಲವು. ಮೇಲೆ ಹೆಸರಿಸಿದ 'ಸಮರಾಂಗಣಸೂತ್ರಧಾರ'ವು ಪರಮಾರ ದೊರೆ ಭೋಜನಿಂದ ಸು 11 ನೇ ಶತಮಾನದ ಮಧ್ಯಾವಧಿಯಲ್ಲಿ ರಚಿತವಾದುದು. ಅದರಲ್ಲಿ ಔತ್ತರೇಯ 'ನಾಗರ ಪ್ರಾಸಾದ', 'ಭೂಮಿಜ ಪ್ರಾಸಾದ' ಮತ್ತು ಅವುಗಳ ವೈವಿಧ್ಯಗಳ ವಿವರಗಳಿಗೆ ಪ್ರಾಶಸ್ತ್ಯ ನೀಡಲಾಗಿದೆಯಾದರೂ ಎರಡು 'ದ್ರಾವಿಡ ಪ್ರಾಸಾದ'ಕ್ಕೆ ಸಂಬಂಧಿಸಿವೆ : ಒಂದು, ದ್ರಾವಿಡ ಪೀಠಗಳ (ಅಧಿಷ್ಠಾನ) ಕುರಿತು ; ಹಾಗೂ ಇನ್ನೊಂದು, 1 ರಿಂದ 12 ಭೂಮಿಗಳುಳ್ಳ ದ್ರಾವಿಡ ಪ್ರಾಸಾದಗಳ ವರ್ಣನೆಯ ಕುರಿತು, ದ್ರಾವಿಡ ದೇಗುಲಗಳ ಪಾದಬಂಧ, ವೇದಿಬಂಧ, ಶ್ರೀಬಂಧ, ಪ್ರತಿಕ್ರಮ ಮತ್ತು ಕ್ಷುರಕಬಂಧ ಎಂಬ ಐದು ಪ್ರಕಾರದ ಪ್ರಮುಖ ಪೀಠ ಮಾದರಿಗಳನ್ನು ಅದರಲ್ಲಿ ವಿವರಿಸಲಾಗಿದೆ. ಇವುಗಳಿಗೆ ಸಂಬಂಧಿಸಿದಂತೆ ಖುರಕ, ಪದ್ಮಪತ್ರಿಕಾ, ಕಣಿಕ, ಕುಮುದ, ಕಣಿಕ, ಮಕರ, ಮಕರಪಟ್ಟಿಕಾ, ನಾಸಿಯುಕ್ತ ಕಪೋತ, ಪದ್ಮಪತ್ರಿಕಾ ಮತ್ತು ವೇದಿ ಎಂಬ ಥರಗಳನ್ನು (ಮಡಿಕೆಗಳನ್ನು) ಸಹ ಗುರುತಿಸಿದೆ.

ಇತ್ತೀಚಿಗೆ ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಹೂಲಿಯಲ್ಲಿರುವ ಪಂಚಲಿಂಗೇಶ್ವರ ದೇವಾಲಯನ್ನು ಹಾಗೂ ಅದರ ಶಾಸನಗಳನ್ನು ಸ್ಥಳದಲ್ಲಿಯೇ ಅಧ್ಯಯನ ಮಾಡುವ ಪ್ರಸಂಗವೊದಗಿತು. ಆಗ ವಾಸ್ತುಶಿಲ್ಪ ಪರಿಭಾಷೆಗೆ ಸಂಬಂಧಿಸಿದಂತೆ ಕುತೂಹಲಕಾರಿ ಅಂಶಗಳು ಗಮನಕ್ಕೆ ಬಂದವು. ಅವುಗಳನ್ನು ಇಲ್ಲಿ ಓದುಗರೊಂದಿಗೆ ಹಂಚಿಕೊಳ್ಳುತ್ತೇನೆ. ಶಾಸನಗಳ ಪಾಠಗಳನ್ನು ಮತ್ತು ಸಾರಾಂಶವನ್ನು ಪ್ರಬಂಧದ ಕೊನೆಯಲ್ಲಿ ನೀಡಿದ್ದೇನೆ.

ಹೂಲಿಯ ಪಂಚಲಿಂಗೇಶ್ವರ ದೇವಾಲಯವು ಪಂಚಕೂಟ ರೀತಿಯ ವಿಶಿಷ್ಟ ದೇಗುಲ. ಆಯತಾಕಾರದ ದಕ್ಷಿಣೋತ್ತರವಾಗಿ ಹೆಚ್ಚು ಉದ್ದವಾಗಿರುವ ಗೂಢಮಂಟಪದ ಪಶ್ಚಿಮಪಾರ್ಶ್ವದಲ್ಲಿ ಅದೇ ಆಕಾರದ ಮೂರು ದ್ವಾರಗಳುಳ್ಳ ಮುಖ್ಯ ಗರ್ಭಗೃಹವಿದೆ. ಗೂಢಮಂಟಪದ ಇನ್ನೆರಡು ಪಾರ್ಶ್ವಗಳಲ್ಲಿ (ಉತ್ತರ ಮತ್ತು ದಕ್ಷಿಣ) ಇನ್ನೆರಡು ಗರ್ಭಗೃಹಗಳಿವೆ. ಮುಂದಿರುವ ದ್ವಾರದಿಂದ ಅಗ್ರಮಂಟಪದಿಂದ ಗೂಢಮಂಟಪಕ್ಕೆ ಪ್ರವೇಶವಿದೆ. ಆಯತಾಕಾರದ ಮುಖ್ಯಗರ್ಭಗೃಹಕ್ಕೆ ಮೂರು ಹಾಗೂ ಉಳಿದೆರಡು ಗರ್ಭಗೃಹಗಳಿಗೆ ಒಂದೊಂದು, ಹೀಗೆ ಒಟ್ಟು ಐದು ದ್ರಾವಿಡ ಶಿಖರಗಳಿವೆ. ಈಗ ಐದು ಲಿಂಗಗಳನ್ನು ಪ್ರತಿಷ್ಠಾಪಿಸಿರುವುದರಿಂದ ಪಂಚಲಿಂಗೇಶ್ವರ ಎಂಬ ಹೆಸರು ಬಿದ್ದಿದೆ. ಆದರೆ ಇದು ಮೂಲತಃ 'ಮಾಣಿಕ್ಯತೀರ್ಥ' ಎಂಬ ಹೆಸರುಳ್ಳ ಜೈನಬಸದಿಯಾಗಿತ್ತು. ಗರ್ಭಗೃಹದ ದ್ವಾರಬಂಧಗಳ ನಿರ್ಮಾಣ ಕಾಲ ಕ್ರಿ.ಶ. 1220. ಅದಕ್ಕಿಂತ ಸ್ವಲ್ಪ ಮುಂಚೆ ದೇವಾಲಯ ನಿರ್ಮಾಣವಾಗಿರಬೇಕು.

ಈ ದೇವಾಲಯದ ಅಧಿಷ್ಠಾನದ ಥರಗಳು ಹಾಗೂ ಗೋಡೆಯಲ್ಲಿ ಕೆಲವು ಕಿರುಶಾಸನಗಳಿದ್ದು ಆಯಾ ಭಾಗಗಳನ್ನು ಹೆಸರಿಸಿವೆ. ಅಧಿಷ್ಠಾನದ ಮೇಲೆ ಗೋಡೆಯಲ್ಲಿರುವ ಶಾಸನ 'ಪಿಷ್ಟ ತರ ಮಟ್ಟ' ವನ್ನು ಉಲ್ಲೇಖಿಸಿದೆ (ಶಾಸನ ಸಂಖ್ಯೆ 1). 'ಪಿಷ್ಟ' ಪದವು 'ಪೀಠ' ಕ್ಕೆ ಪರ್ಯಾಯವಾಗಿ ಒಡಿಸಾದ ದೇವಾಲಯವಾಸ್ತು ಪರಿಭಾಷೆಯಲ್ಲಿ ಬಳಕೆಯಾಗಿರುವುದು ಸರ್ವವಿದಿತ. ಕರ್ನಾಟಕದಲ್ಲಿಯೂ ಪಿಷ್ಟ=ಪೀಠ ಪದವೇ ಅಧಿಷ್ಠನವನ್ನು ಸೂಚಿಸಲು ಬಳಕೆಯಾಗುತ್ತಿತ್ತೆಂಬುದು ಈ ಶಾಸನದಿಂದ ಸ್ಪಷ್ಟವಾಗುತ್ತದೆ. 'ಸಮರಾಂಗಣ ಸೂತ್ರಧಾರ'ದಲ್ಲಿ ಕೂಡ ಇದನ್ನು ಪೀಠ ಎಂದೇ ಹೆಸರಿಸಿರುವುದು ಈ ದೃಷ್ಟಿಯಿಂದ ಗಮನಾರ್ಹವಾಗಿದೆ. ಕಪೋತ ಥರದಲ್ಲಿರುವ ಶಾಸನ (ಶಾಸನ ಸಂಖ್ಯೆ 2) ಕಪೋತವನ್ನು ಗುರುತಿಸಲು ನೇರವಾಗಿ ಸಹಕಾರಿಯಾಗಿದೆ. ಹಾಗೆಯೇ ಕಪೋತರ ಮಟ್ಟದ ಮೇಲುಗಡೆ ಇರುವ ಥರವನ್ನು ಶಾಸನದಲ್ಲಿ (ಶಾಸನ ಸಂಖ್ಯೆ 3) ಮಕರವಟ್ಟಿಗೆ ಎಂದು ಕರೆದಿದೆ. ಪ್ರಭಾಕರ್ ಅವರು 'ಕಂಟಕ' ಎಂದು ಗುರುತಿಸುವ ಥರವಿದು. 'ಮಕರವಟ್ಟಿಗೆ' ಯು ಸಂಸ್ಕೃತ 'ಮಕರಪಟ್ಟಿಕಾ;ದ ಕನ್ನಡರೂಪ. ಧಾಕಿ, ಆಡಂ ಹಾರ್ಡಿ ಮುಂತಾದ ವಿದ್ವಾಂಸರು ಇದನ್ನೇ 'ವ್ಯಾಳಮಾಲಾ' ಎಂಬುದಾಗಿ ವರ್ಣಿಸಿದ್ದಾರೆ. ಪ್ರಸ್ತುತ ಥರದಲ್ಲಿ ಮಕರಗಳ ಸಾಲು ಇರುತ್ತದಾದ್ದರಿಂದ ಅದನ್ನು ಮಕರವಟ್ಟಿಗೆ ಎಂದು ಕರೆದಿರುವದು ಸೂಕ್ತವಾಗಿದೆ. ಅಪೂರ್ಣವಿದ್ದಾಗ ಈ ಥರವು ಕೇವಲ ಕೇದಗೆಗಳ (ಮುಳ್ಳಿನ) ಸಾಲಿನಂತೆ ಗೋಚರಿಸುತ್ತದೆ. ಪ್ರಸ್ತುತ ಪಂಚಲಿಂಗೇಶ್ವರ ದೇವಾಲಯದ ಅಧಿಷ್ಠಾನದಲ್ಲಿ ಇದು ಅಲಂಕಾರ ರಹಿತಾಗಿಯೇ ಉಳಿದಿದೆ. ಹೂಲಿಯ ಇತರ ಕೆಲವು ದೇಗುಲಗಳಲ್ಲಿ ಮಕರವಟ್ಟಿಗೆಯ ಸ್ಪಷ್ಟರೂಪವನ್ನು ಕಾಣಬಹುದು.

ಗರ್ಭಗೃಹಕ್ಕೆ ಮೂರು ದ್ವಾರಗಳಿವೆ ಎಂಬುದನ್ನು ಆಗಲೇ ಹೇಳಿದೆ. ಇವುಗಳಲ್ಲಿ ಎರಡು ದ್ವಾರಬಂಧಗಳಲ್ಲಿರುವ ಶಾಸನಗಳು (ಶಾಸನ ಸಂಖ್ಯೆ 4 ಮತ್ತು 5) ದ್ವಾರಬಂಧ ಎಂಬರ್ಥದಲ್ಲಿ 'ದ್ವಾರಶಾಖೆ' ಪದವನ್ನು ಬಳಸಿರುವುದು ಕುತೂಹಲಕಾರಿಯಾಗಿದೆ. ಸಾಮಾನ್ಯವಾಗಿ ದ್ವಾರದ ವಿವಿಧ ಪಟ್ಟಿಗಳಿಗೆ 'ಶಾಖೆ' ಎಂದು ಕರೆಯುವುದು ರೂಢಿ. ಆದರೆ ಇಲ್ಲಿ ದ್ವಾರಶಾಖೆ ಮಾಡಿಸುವುದೆಂದರೆ ಶಾಖೆಗಳ ಸಹಿತ ದ್ವಾರಬಂಧವನ್ನು ಮಾಡಿಸುವುದು ಎನ್ನುವ ಅರ್ಥ ಮೂಡಿದೆ.

ಮೇಲೆ ಪರಿಶೀಲಿಸಿರುವ ಶಾಸನಗಳ ಹಿನ್ನೆಲೆಯಲ್ಲಿ 'ಸಮರಾಂಗಣಸೂತ್ರಧಾರ'ವು ಮಧ್ಯಯುಗೀನ ಕರ್ನಾಟಕದ ದೇವಾಲಯವಾಸ್ತು ಪರಿಭಾಷೆಯ ದೃಷ್ಟಿಯಿಂದ ಬಹಳಷ್ಟು ಪ್ರಯೋಜನಕಾರಿಯಾಗಿದೆ ಎಂಬುದು ಮತ್ತೊಮ್ಮೆ ಸ್ಪಷ್ಟಪಟ್ಟಿದೆ. ಅದರಲ್ಲಿರುವ ಪಾರಿಭಾಷಿಕ ಪದಗಳ ಕನ್ನಡೀಕೃತ (ಮಕರವಟ್ಟಿಗೆ, ಪಿಷ್ಟ, ಕಪೋತ ತರ ಇತ್ಯಾದಿ) ರೂಪಗಳನ್ನು ಆ ಕಾಲದ ದೇವಾಲಯಗಳ ವರ್ಣನೆಗೆ ಇಂದು ಕೂಡ ನಾವು ಬಳಸಬಹುದೇನೊ.

**ಶಾಸನಗಳ ಪಾಠ ಮತ್ತು ಸಾರಾಂಶ**

ಶಾಸನ ಸಂಖ್ಯೆ 1

ಪಂಚಲಿಂಗೇಶ್ವರ ದೇವಾಲಯದ ಪೂರ್ವದಿಕ್ಕಿನ ಅಧಿಷ್ಠಾನದ ಮೇಲ್ಗಡೆ ಗೋಡೆಯ ಕೆಳಭಾಗದಲ್ಲಿ (ಸು. 13ನೆಯ ಶತಮಾನ)

(ಂಖಖಇ 1940–41, ಂಠಿಠಿ.ಇ.ಓಔ. 27)

1. @ ಪಿಷ್ಟ ತರ
2. ಮಟ್ಟ 1 ವಿಸು
3. ದ್ಧಿ ।
4. (ಸಾರಾಂಶ : ಪಿಷ್ಟ ಥರ ಮಟ್ಟ 1 ವಿಶುದ್ಧಿ)

**ಶಾಸನ ಸಂಖ್ಯೆ 2**

ಪಂಚಲಿಂಗೇಶ್ವರ ದೇವಾಲಯದ ಉತ್ತರ ಗರ್ಭಗೃಹದ ಪೂರ್ವದಿಕ್ಕಿನ ಅಧಿಷ್ಠಾನದ
ಕಪೋತಭಾಗದಲ್ಲಿ (ಸು. 13ನೆಯ ಶತಮಾನ)
(ಂಖಖಇ 1940–41, ಂಠಿಠಿ.ಇ., ಓಂ. 28)

@ ಕಪೋತ ತರ ಮಟ್ಟ ವಿಸುದ್ಧಿ 8 [॥*]

**ಶಾಸನ ಸಂಖ್ಯೆ 3**

ಪಂಚಲಿಂಗೇಶ್ವರ ದೇವಾಲಯದ ದಕ್ಷಿಣಪಾರ್ಶ್ವದ ಅಧಿಷ್ಠಾನದಲ್ಲಿ ಮಕರಪಟ್ಟಿಕೆಯಲ್ಲಿ (ಸು.13 ನೆಯ ಶತಮಾನ)
(ಂಖಖಇ 1940–41, ಂಠಿಠಿ.ಇ., ಓಂ. 29)

1. @ ಮಕರವಟ್ಟಿಗೆ ವಿ –
2. ಸುದ್ಧಿ 9 ॥*] ಪಿಟ್ಟಿಗ ಗ–
3. ರು[ಡ*] ಪಟಿ [ಕೆ*] ಯ್ದ [॥*]

(ಸಾರಾಂಶ : ಮಕರವಟ್ಟಿಗೆ ವಿಶುದ್ಧಿ 9. ಪಿಟ್ಟಿಗ ಗರುಡನು ಈ ಪಟ್ಟಿಯನ್ನು ಮಾಡಿದನು)

**ಶಾಸನ ಸಂಖ್ಯೆ 4**

ಪಂಚಲಿಂಗೇಶ್ವರ ದೇವಾಲಯದ ಗರ್ಭಗೃಹದ 1 ನೆಯ ದ್ವಾರಬಂಧದಲ್ಲಿರುವ ಶಾಸನ
(ಂಖಖಇ 1940–41, ಂಠಿಠಿ.ಇ., ಓಂ. 242 : ಪಾಠ ಅಪ್ರಕಟಿತ)

1. @ ಶ್ರೀ ಮನ್ನೇಮಿಚಂದ್ರಸಿದ್ಧಾನ್ತಚಕ್ರವರ್ತಿಗಳ ಗುಡ್ಡುಗಳಪ್ಪ
2. ನವಿಲೂರ ಗೋವರಿಯ ಕಾಳಿಗಾವುಂಡನು ತಾವರೆ ಮಹದೇವಿಸಷ್ಟಿ (ಸೆಟ್ಟಿ)
3. ಕೊಳಗದ ಕೇತಸಷ್ಟಿ (ಸೆಟ್ಟಿ) ಬಳಿಯರ ಕೇತಿಸಷ್ಟಿ (ಸೆಟ್ಟಿ) ಗುಡರ ಪಟ್ಟಸಷ್ಟಿ (ಸೆಟ್ಟಿ)
4. [ಮಿ] ಳರ ಮಾಳಿಸಷ್ಟಿ (ಸೆಟ್ಟಿ) ಕೊಂಡಸ ಬಮ್ಮಿಸೆಟ್ಟಿ ಮುಖ್ಯವಾಗಿ ಸಮ
5. ಸ್ತ ನಕರಗಳುಂ ಎರಡು ದ್ವಾರಸಾಖೆಗಳಂ ಸ್ಥಿರವಾ
6. ಗಿ ಮಾಡಿಸಿದರು[॥*] ಮಂಗಳ ಮಹಾ ಶ್ರೀ ಶ್ರೀ ಶ್ರೀ [॥*]

(ಸಾರಾಂಶ: ಹೂಲಿಯ ಪಂಚಲಿಂಗೇಶ್ವರ ದೇವಾಲಯದ ಗರ್ಭಗೃಹಕ್ಕಿರುವ ಮೂರು ದ್ವಾರಬಂಧಗಳಲ್ಲಿ ಮೊದಲನೇ

ದ್ವಾರಬಂಧದಲ್ಲಿ ಬರೆದಿರುವ ಈ ಶಾಸನವು ಕ್ರಿ.ಶ. 13ನೇ ಶತಮಾನದ ಕನ್ನಡ ಲಿಪಿ ಮತ್ತು ಭಾಷೆಯಲ್ಲಿದೆ. ಶ್ರೀ ನೇಮಿಚಂದ್ರಸಿದ್ಧಾಂತ ಚಕ್ರವರ್ತಿಗಳ ಶಿಷ್ಯರಾದ ನವಿಲೂರ ಗೋವರಿಯ ಕಾಳಿಗಾವುಂಡ, ತಾವರೆ ಮಹಾದೇವಿಸೆಟ್ಟಿ, ಕೊಳಗದ ಕೇತಿಸೆಟ್ಟಿ, ಬಳ್ಳಿಯರ ಕೇತಿಸೆಟ್ಟಿ, ಗುಡರ ಪಟ್ಟಸೆಟ್ಟಿ, ಮಿಳರ ಮಾಳಿಸೆಟ್ಟಿ, ಕೊಂಡ ಬಮ್ಮಿಸೆಟ್ಟಿ ಮುಖ್ಯವಾಗಿ ಸಮಸ್ತ ನಕರಗಳು ಎರಡು ದ್ವಾರಶಾಖೆಗಳನ್ನು ಸ್ಥಿರವಾಗಿ ಮಾಡಿಸಿದರೆಂದು ಅದು ತಿಳಿಸುತ್ತದೆ. ಇಲ್ಲಿ ಎರಡು ದ್ವಾರಶಾಖೆಗಳೆಂದರೆ ಎರಡು ಗರ್ಭಗೃಹಗಳ ದ್ವಾರಶಾಖೆಗಳೆಂದು ಅರ್ಥ).

**ಶಾಸನ ಸಂಖ್ಯೆ 5**

ಪಂಚಲಿಂಗೇಶ್ವರ ದೇವಾಲಯದ 3ನೆಯ ಗರ್ಭಗೃಹದ ದ್ವಾರಬಂಧದಲ್ಲಿರುವ ಶಾಸನ

(ಂಖಖಙ 1940–41, ಂಡಿಡಿ.ಇ., ಓಔ. 25, ಔ. 242 ; ಪಾಠ ಅಪ್ರಕಟಿತ)

1. ಶ್ರೀಮತು ಪ್ರಭಾಚಂದ್ರಸಿದ್ಧಾಂತದೇವರ ಗುಡ್ಡಗಳಪ್ಪ ಹಡಪದ ಬೋಸ್ಯಣನ ಮಗನಪ್ಪ
   ಸೋಮಯ್ಯನು ಸಮಸ್ತಾದಿವೆರ್ಗ್ಗಡೆ ಬಮ್ಮಯನುಂ ಧಾರವಾಡದ ಹತ್ತಿಯ
   ಮಾಳಿಸಷ್ಟಿ (ಸೆಟ್ಟಿ) ಯುಂ ಬಾಳಯ್ಯ ಸೋಮೆಯನುಂ ದೊಡವಾಡದ ಬೆ(ಚ?) ಸ[ಳು?] ಏಕ
   ಬಸವಿಸಷ್ಟಿ (ಸೆಟ್ಟಿ) ಯು ಕಂಭದ ನೇಮಿಸಷ್ಟಿ (ಸೆಟ್ಟಿ) ಬಲ್ಲಿ ಸಷ್ಟಿ (ಸೆಟ್ಟಿ) ಮುಖ್ಯವಾಗಿ ಸ
2. ಮಸ್ತ ಭವ್ಯಜನಂಗಳು ಸಕವರ್ಷಂ 1142 ವಿಕ್ರಮ ಸಂವತ್ಸರದಾಷಾಢ ಶುದ್ಧ ಬುಧವಾರ ಅಮವಾಸೆಯಂದು
   ಹೂಲಿಯ ಮಾಣಿಕ್ಯತೀರ್ತ್ಥದ ದ್ವಾರಸಾಖೆಯಂ ಸುಪ್ರತಿಷ್ಠೆಯಾಗಿ
   ಮಾಡಿಸಿದರು [॥*] ಮಂಗಳ ಮಹಾ ಶ್ರೀ ಶ್ರೀ ಶ್ರೀ [॥*] ಕುಱುವನೂರ ರಾಜೋಜ
   ಮಾಡಿದನು[॥*]

(ಸಾರಾಂಶ : ಹೂಲಿಯ ಪಂಚಲಿಂಗೇಶ್ವರ ದೇವಾಲಯದ ಗರ್ಭಗೃಹದ ಮೂರನೆಯ ದ್ವಾರಬಂಧದಲ್ಲಿರುವ ಈ ಶಾಸನ ಕ್ರಿ.ಶ. 13ನೇ ಶತಮಾನದ ಕನ್ನಡ ಲಿಪಿ ಮತ್ತು ಭಾಷೆಯಲ್ಲಿದೆ. ಮಿತಿ ಶಕವರ್ಷ 1142, ವಿಕ್ರಮ ಸಂವತ್ಸರ, ಆಷಾಢ ಶುದ್ಧ ಬುಧವಾರ ಅಮವಾಸ್ಯೆ. ಈ ವಿವರ ಬುಧವಾರ, 9 ಜೂನ್ 1220 ಕ್ಕೆ ಸರಿಹೊಂದುತ್ತದೆ.

ಶ್ರೀ ಪ್ರಭಾಚಂದ್ರಸಿದ್ಧಾಂತದೇವರ ಶಿಷ್ಯರಾದ ಬೋಸ್ಯಣನ ಮಗ ಸೋಮಯ್ಯ, ಹೆಗ್ಗಡೆ ಬಮ್ಮಯ, ಧಾರವಾಡದ ಹತ್ತಿಯ ಮಾಳಿಸೆಟ್ಟಿ, ಬಾಳಯ್ಯ ಮತ್ತು ಸೋಮೆಯ, ದೊಡವಾಡದ ಬಸವಿಸೆಟ್ಟಿ, ಕಂಬದ ನೇಮಿಸೆಟ್ಟಿ ಮತ್ತು ಬಲ್ಲಿಸೆಟ್ಟಿ ಮುಖ್ಯವಾಗಿ ಸಮಸ್ತ ಭವ್ಯಜನರು ಉಲ್ಲಿಖಿತ ದಿನದಂದು ಹೂಲಿಯ ಮಾಣಿಕ್ಯತೀರ್ಥದ ದ್ವಾರಶಾಖೆಯನ್ನು ಮಾಡಿಸಿದರೆಂದು ಅದು ತಿಳಿಸುತ್ತದೆ. ಈ ದ್ವಾರಶಾಖೆಯನ್ನು ಕು. ಕುಱುವನೂರ ರಾಜೋಜನು ಮಾಡಿದನು.

**ಟಿಪ್ಪಣಿಗಳು**

1. ವಿವರಗಳಿಗೆ ಮತ್ತು ಸಂಬಂಧಿಸಿದ ಚಿತ್ರಗಳಿಗೆ ನೋಡಿ : ಧಾಕಿ ಎಂ.ಎ., 1975, ಇಂಡಿಯನ್ ಟೆಂಪಲ್ ಫಾರ್ಮ್ಸ್ ಇನ್ ಕರ್ಣಾಟ ಇನ್ಸ್ಕ್ರಿಪ್ಷನ್, ಅಭಿನವ ಪ್ರಕಾಶ, ದೆಹಲಿ : ಚರ್ಚೆಗೆ ನೋಡಿ : ಪ್ರಭಾಕರ್ ಎಂ.ಎನ್., 2000, ದೇವಾಲಯ ವಾಸ್ತು ಚಂದ್ರಿಕೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
2. ಪ್ರಭಾಕರ್ ಎಂ.ಎನ್., ಅದೇ, ಪು 14.
3. ಅಗ್ರವಾಲ ವಿ.ಎಸ್.(ಸಂ), 1966, ಸಮರಾಂಗಣಸೂತ್ರಧಾರ, ಓರಿಯಂಟಲ್ ಇನ್ಸಿಟ್ಯೂಟ್, ಬರೋಡಾ : ಅಧ್ಯಾಯಗಳು 61 ಮತ್ತು 62.
4. ವಾಸ್ತುವಿವರಗಳನ್ನು ನೋಡಿ : ಗೆರಾರ್ಡ್ ಪೊಕೆಮ, 2003, ಚಾಳುಕ್ಯ ಆರ್ಕಿಟೆಕ್ಚರ್, ಸಂಪುಟ 1, ಮುನ್ಶಿರಾಂ ಮನೋಹರಿಲಾಲ್ ಪ್ರಕಾಶನ, ದೆಹಲಿ, ಪು. 366.
5. ಪ್ರಭಾಕರ್ ಎಮ್.ಎನ್., ಅದೇ ಪುಟ 52.
6. ಎನ್ಯುವಲ್ ರಿಪೋರ್ಟ್ಸ್ ಆನ್ ಸೌಥ ಇಂಡಿಯನ್ ಎಫಿಗ್ರಫಿ 1940–41 (ಂಖಖಙ)ಅಪೆಂಡಿಕ್ಸ್–ಇ ನಂ. 29